ಈಗಾಗಲೇ ವೈರಲ್ ಫೀವರ್ ಇರುವುದರಿಂದ, ಆದಷ್ಟು ಹೆಚ್ಚು ಜಾಗ್ರತೆ ವಹಿಸಬೇಕು, ಅಲ್ಲಿ ಮಂಚ ಕೂಡ ಇಲ್ಲ, 10–15 ಸಾವಿರ ಜನಸಂಖ್ಯೆ ಇದೆ, ಪಂಚಾಯಿತಿ ಇದೆ, ಅಲ್ಲಿ ಸಾಕಷ್ಟು ಜನ ಪ್ರವಾಸಿಗರು ಬರುತ್ತಿರುತ್ತಾರೆ, ಆದುದರಿಂದ ಆ ಬಗ್ಗೆ ಹೆಚ್ಚು ಮುತುವರ್ಜಿಯನ್ನು ವಹಿಸಿ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಅಧ್ಯಕ್ಷರು, ಇದೊಂದು ನೀರಾವರಿ ಇಲಾಖೆಗೆ ಸೇರಿದ ಆಸ್ಪತ್ರೆಯಾಗಿರುವುದರಿಂದ ಇದುವರೆವಿಗೂ ನಾವು ಏನೂ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ, ನಾನು ಈಗಾಗಲೇ ಹೇಳಿರುವಂತೆ, ಮಾನ್ಯ ಸದಸ್ಯರ ಕೋರಿಕೆಯ ಮೇರೆಗೆ ನಾನು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ, ಆದಷ್ಟು ಶೀಘ್ರವಾಗಿ ಈ ಆಸ್ಪತೆಯನ್ನು ಆರೋಗ್ಯ ಇಲಾಖೆಗೆ ಸೇರಿಸುತ್ತೇವೆಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ರಾಜ್ಯದಲ್ಲಿ ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಮಂಜೂರು ಮಾಡುವ ಬಗ್ಗೆ.

172 (890) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು; (ಪಟ್ಟಿ ನೀಡುವುದು)

ಇ) ಯಾವ ನಿರ್ದಿಷ್ಟವಾದ ಕಾಲಮಿತಿ ಹಾಕಿಕೊಂಡು ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಆ) ಮತ್ತು ಇ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೊಂದರಂತೆ ಪಶುವೈದ್ಯರನ್ನೊಳಗೊಂಡ ಸಂಸ್ಥೆ ಇರಬೇಕೆಂದು ಶಿಫಾರಸ್ಸು ಮಾಡಿರುವ ಮೇರೆಗೆ ಪ್ರಸ್ತುತ ಹಾಲಿ ಇರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರವಿದ್ದು ಹೊಸ ಪ್ರಾಥಮಿಕ ಪಶುಚಿಕಿತ್ಸಾಕೇಂದ್ರಗಳನ್ನು ತೆರೆಯುವ ಕಾರ್ಯಕ್ರಮ ಇರುವುದಿಲ್ಲ.

ಪಶುಪರೀಕ್ಷಕರ ಸೇವೆಯಲ್ಲಿ (ಪ್ಯಾರಾ ವೆಟ್ಸ್) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ಕೈಬಿಡಲಾಗಿದೆ. ಪ್ರತಿ ಪಶುಚಿಕಿತ್ಸಾಲಯದಲ್ಲಿ ಪಶುವೈದ್ಯರು ಇರುವುದು ಅವಶ್ಯಕವಿರುತ್ತದೆ.

ಡಾ: ಡಿ.ಎಂ. ನಂಜುಂಡಪ್ಪರವರ ವರದಿ ಆಧಾರದ ಮೇಲೆ ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ 69 ಪಶು ಚಿಕಿತ್ಸಾಲಯಗಳನ್ನಾಗಿ ಪ್ರಾರಂಭಿಸುವ ವಿಚಾರವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆಯ ಸಹಮತಿ ದೊರೆತ ನಂತರ ಪ್ರಸ್ತುತ ಸಾಲಿನಲ್ಲಿಯೇ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುವುದು. (ಡಾ: ಡಿ.ಎಂ. ನಂಜುಂಡಪ್ಪರವರ ವರದಿ ಆಧಾರದ ಮೇಲೆ ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಬಹುದಾದ 69 ಪಶುಚಿಕಿತ್ಸಾಲಯಗಳ ತಾತ್ಕಾಲಿಕ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 890 ಕ್ಕೆ ಅನುಬಂಧ

ಪ್ರಾದೇಶಿಕ ಅಸಮತೋಲನೆ ನಿವಾರಣಾ ಸಮಿತಿಯ ಡಾ: ಎಂ. ನಂಜುಂಡಪ್ಪ ರವರ ವರದಿಯ ಆಧಾರದ ಮೇಲೆ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶು ಚಿಕಿತ್ಸಾಲಯ ಇಲ್ಲದಿರುವ ಈ ಕೆಳಕಂಡ ತಾಲ್ಲೂಕುಗಳಲ್ಲಿ ಮಾತ್ರ 69 ಹೊಸ ಪಶುಚಿಕಿತ್ಸಾಲಯ ತೆರೆಯಲು ಉದ್ದೇಶಿಸಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	2003ನೇ ಸಾಲಿನ ಜಾನುವಾರು ಗಣತಿಯಂತೆ ಒಟ್ಟು ಜಾನುವಾರು ಘಟಕಗಳು	ಅವಶ್ಯವಿರುವ ಪಶು ವೈದ್ಯಕೀಯ ಸಂಸ್ಥೆಗಳ ಸಂಖ್ಯೆ	ಹಾಲಿ ಇರುವ ಪಶು ವೈದ್ಯಕೀಯ ಸಂಸ್ಥೆಗಳ ಸಂಖ್ಯೆ	ಕೊರತೆ ಇರುವ ಪಶು ವೈದ್ಯಕೀಯ ಸಂಸ್ಥೆಗಳ ಸಂಖ್ಯೆ	ಪಶು ಚಿಕಿತ್ಸಾಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಪ್ರಸ್ತಾಪಿಸಲಾದ ಗ್ರಾಮಗಳು
1	2	3	4	5	6	7	8
1	ಬಳ್ಳಾರಿ	ಸಂಡೂರು	78033	16	12	4	1) ಸುಶೀಲಾನಗರ
							2) ದೇವಗಿರಿ
							3) ತಾರಾನಗರ
							4) ಯಶವಂತನಗರ
		ಕೂಡ್ಲಿಗಿ	138597	28	17	11	1) ಶಿವಮರ
							2) ಹಿರೇಹೆರಾಡಳು
							3) ಚೌಡಾಪುರ
							4) ಹೀರೆಕುಂಬಳಗುಂಟಿ
							5) ಬಣವಿಕಲ್ಲು
							6) ಹುರಳಿಸಾಲು

1	2	3	4	5	6	7	8
							7) ರಾಮದುರ್ಗ
							8) ಅಪ್ಪಯ್ಯನಹಳ್ಳಿ
							9) ನಾಗರಕಟ್ಟಿ
							10) ಗಂಗಮ್ಮನಹಳ್ಳಿ
							11) ಕೆ. ಅಯ್ಯನಹಳ್ಳಿ
2.	ಬೀದರ್	ಬಸವಕಲ್ಯಾಣ	10395	20	15	05	1) ಭೋಸೂಲ್
							2) ಉಜಳಂಬಿ
							3)ಭೋಸಗಾ
							4) ಒಟಿಗೇರಾ
							5)ಕಲಕೋರಾ
		ಔರಾದ್	102692	21	18	3	1) ವಡಗಾಂವ್ (ಡಿ)
							2) ಜೆಕ್ಲಿ (ಯು)
							3) ಮುರ್ಕಿ
3.	ಗುಲ್ಬರ್ಗಾ	ಸುರಪುರ	162354	32	28	4	1) ಬಾನಾಪುರ (ಎಸ್.ಎಚ್.)
							2) ಗೆದ್ದಲಮರಿ
							3) ಮಾಳನೂರು
							4) ಕೋಳಿಪಾಳ
		ಶಹಾಪುರ	158802	32	27	5	1) ಚಟ್ನಳ್ಳಿ
							2) ಕೊಳ್ಳುರು (ಎಂ)

1	2	3	4	5	6	7	8
							3) ನಾಗನಟಿಗಿ
							4) ರುಸ್ತಾಪುರ
							5) ಗುಲ್‌ಸರಮ್
		ಯಾದಗಿರಿ	180177	36	35	1	1) ಕಾಕಲೂರು
4.	ಕೋಲಾರ	ಬಾಗೇಪಲ್ಲಿ	70121	14	10	4	1) ಬೆಳ್ಳೂರು
							2) ಸೋಮನಾಥಪುರ
							3) ಪಾಳ್ಯಕೆರೆ
							4) ಚೊಲಪಾಳ್ಯ
5.	ಮೈಸೂರು	ಹೆಚ್.ಡಿ. ಕೋಟೆ	106320	21	19	2	1) ಅಣ್ಣೂರು
							2) ಅಂತರಸಂತೆ
6.	ರಾಯಚೂರು	ಸಿಂಧನೂರು	136202	27	18	9	1) ಕೋಳಬಾಳ
							2) ಅಲಬನೂರ
							3) ಉಡಬಾಳ (ವ)
							4) ರಾಮನಗಾಳ
							5) ಹಂಪನಾಳ
							6) ಕಲ್ಮಂಗಿ
							7) ಗೋನವಾರ
							8) ಆರ್.ಹೆಚ್.ನಂ.1 (Burma Camp)
							9) ರೌಡಕುಂದಾ

1	2	3	4	5	6	7	8
		ಮಾನ್ವಿ	133075	27	20	7	1) ರಾಜಂಬಂಡಾ 2) ಹಿರೇಹಣಿಗಿ 3) ಮಾದಗಿರಿ 4) ಸಾದಪೂರ 5) ಚಿಕ್ಕಕೊಟ್ನೆಕಲ್ 6) ಅಮೀನಗಡ 7) ಚಾಗಬಾವಿ
	ರಾಯಚೂರು	ಲಿಂಗಸುಗೂರು	122393	24	19	5	1) ಬಯ್ಯಾಪುರ 2) ಗೋರಬಾಳ 3) ಗೌಡೂರು 4) ಹಟ್ಟಿ 5) ಕಸಬಾ ಲಿಂಗಸುಗೂರು
		ದೇವದುರ್ಗ	105888	21	12	9	1) ಅಲ್ಕೋಡ 2) ರಾಮದುರ್ಗ 3) ಮುಂಡರಗಿ 4) ಕೊತ್ತದೊಡ್ಡಿ 5) ಕೊಪ್ಪರ 6) ಚಿಂಚೋಡಿ 7) ಗೂಗಲ್ 8) ಮದರಕಲ್ 9) ಚೊಂಡಂಬಳ್ಳಿ

ಚೇರ್ಮನ್ (ಶ್ರೀ ಆರಗ ಜ್ಞಾನೇಂದ್ರರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರವನ್ನು ತೆಗೆಯಬೇಕೆಂದು ನಾನು ಹೇಳಿದ್ದೆ, ಇತ್ತೀಚಿನ ದಿನಗಳಲ್ಲಿ ಅವರು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿದ್ದು ನಿಜ, ಪಶುಆಸ್ಪತ್ರೆಗಳನ್ನಾಗಿ ಅವನ್ನು ಮೇಲ್ದರ್ಜೆಗೆ ಏರಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ, ಯಾವುದೇ ಪಶು ಆಸ್ಪತ್ರೆಗಳಿಗೆ ಪಶು ವೈದ್ಯಾಧಿಕಾರಿಗಳನ್ನು ಹಾಕದೆ ಅದನ್ನು ಮೇಲ್ದರ್ಜೆಗೆ ಏರಿಸಿದರೆ ಅದು ನಿರುಪಯುಕ್ತ; That is what your statistics shows. – ನಿನ್ನೆ ಬಹುತೇಕ ಕೃಷ್ಣಪ್ಪನವರೂ ಕೂಡ ಮಾತನಾಡಿದ್ದಾರೆ, 1875 ಪಶುವೈದ್ಯಾಧಿಕಾರಿಗಳ ಸ್ಯಾಂಕ್ಷನ್ ಪೋಸ್ಟ್ ಇದ್ದರೆ, 936 ಖಾಲಿ ಇವೆ, Sir, there is no meaning in upgrading the hospital, if you don't give doctor, if don't give infrastructure, ತಾವು ಇದ್ದಿದ್ದರೆ (ಡಾ: ವಿ.ಎಸ್. ಆಚಾರ್ಯ) ಇನ್ನೂ ಒಳ್ಳೆಯದಿತ್ತು, ರೇವುನಾಯಕರಿಗೆ ಹೋಗಿ ಇನ್ನೇನು ಆಗುತ್ತದೆಯೋ ದೇವರೇ ಗತಿ, ದಯಮಾಡಿ ಅಪ್‌ಗ್ರೇಡೇಷನ್‌ಗೆ ಸ್ವಲ್ಪ ಮೀನಿಂಗ್ ಇರಬೇಕು, there is a depletion in cattle population also. ಇದರ ಬಗ್ಗೆ ತಾವೇನಾದರೂ ಮಾಡಿಟ್ಟು ಹೋಗಿದ್ದೀರಾ, ಅಥವಾ ಅವರೇನಾದರೂ ಮಾಡುತ್ತಾರಾ? ಏಕೆಂದರೆ, ತಾವೆ ಹಿಂದೆ ಈ ಇಲಾಖೆಯ ಸಚಿವರಾಗಿದ್ದೀರಿ, ನಿರ್ದಿಷ್ಟವಾದ ಉತ್ತರವನ್ನು ತಮ್ಮಿಂದ ಬಯಸುತ್ತೇನೆ.

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಪಶು ಸಂಗೋಪನಾ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಪಶುವೈದ್ಯರಿಲ್ಲದೆ, ಪಶುಚಿಕಿತ್ಸಾ ಕೇಂದ್ರವಾಗಲಿ, ಪಶುಚಿಕಿತ್ಸಾಲಯವನ್ನಾಗಲಿ ಮೇಲ್ದರ್ಜೆಗೇರಿಸುವುದರಲ್ಲೇನೂ ಅರ್ಥವಿಲ್ಲವೆಂಬುದನ್ನು ಪೂರ್ಣ ಒಪ್ಪುತ್ತೇನೆ. ಅದಕ್ಕೋಸ್ಕರವೇ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು ಈ ಸಾರಿ 250 ಪಶುವೈದ್ಯರನ್ನು ನೇಮಕ ಮಾಡಿದ್ದೇವೆ, ಅಧಿಕಾರಕ್ಕೆ ಬಂದ ನಂತರ ತಕ್ಷಣ ಮಾಡಿದ್ದೇವೆ. ಈಗ ಏನಾಗಿದೆ ಎಂದರೆ, ರಾಜ್ಯದಲ್ಲಿ 5000 ಸರಾಸರಿ ಪಶುಗಳ ಸಂಖ್ಯೆಯ ಆಧಾರದ ಮೇಲೆ ಪಶುಚಿಕಿತ್ಸಾ ಕೇಂದ್ರಗಳು, ಚಿಕಿತ್ಸಾಲಯಗಳು ನಮ್ಮಲ್ಲಿ ಇವೆ, ಆದರೆ ಅದು ಪ್ರಾದೇಶಿಕವಾಗಿ ಎಲ್ಲಾ ಕಡೆ ಸರಿಯಾಗಿ ಇದೆ ಎಂಬುದಿಲ್ಲ. ನಂಜುಂಡಪ್ಪ ವರದಿಯಲ್ಲಿ ತಿಳಿಸಿದ ಪ್ರಕಾರ 7 ಜಿಲ್ಲೆಗಳ 13 ತಾಲ್ಲೂಕುಗಳಲ್ಲಿ 69 ಪಶುಚಿಕಿತ್ಸಾ ವ್ಯವಸ್ಥೆ ಬೇಕಾಗಿದೆ, ಹೊಸ ಕೇಂದ್ರಗಳನ್ನು ಚಿಕಿತ್ಸಾಲಯಗಳನ್ನು ಪ್ರಾರಂಭ ಮಾಡಬಾರದೆಂದು ನಾವು ತೀರ್ಮಾನ ಮಾಡಿದ್ದೇವೆ. ಏಕೆಂದರೆ ತಾವು ಹೇಳಿದಂತೆ, ಪ್ಯಾರಾವೆಟನರಿಯೆನ್ಸ್‌ನಿಂದ ಹೆಚ್ಚು ಉಪಯೋಗವಾಗುವುದಿಲ್ಲ – They are not doctors. ಅವರು ಇನ್‌ಸ್ಪೆಕ್ಟರ್ಸ್, ಕಾಂಪೌಂಡರ್ಸ್ ಇರುತ್ತಾರೆ ಅದಕೋಸ್ಕರ ನಮ್ಮ ರಾಷ್ಟ್ರೀಯ ಪಾಲಿಸಿ ಏನಿದೆ ಎಂದರೆ, ಹೊಸ ಕೇಂದ್ರ ಚಿಕಿತ್ಸಾಲಯವಲ್ಲ, ಆಸ್ಪತ್ರೆಯನ್ನು ತೆಗೆಯಬೇಕು ವೈದ್ಯರಿರಬೇಕು ಎಂಬುದು.

ನಮ್ಮ ನಂಜುಂಡಪ್ಪ ಅವರ ಸಮಿತಿಯ ವರದಿಯಲ್ಲಿ ಹೇಳಿದಂತಹ 69 ಕಡೆಗಳಲ್ಲಿ 13 ತಾಲ್ಲೂಕುಗಳಲ್ಲಿ ನಾವು ಚಿಕಿತ್ಸಾಲಯವನ್ನು ಓಪನ್ ಮಾಡುತ್ತೇವೆ. ಅದು ಒಂದು ಎಕ್ಸ್‌ಪ್ಷನ್. ಏಕೆಂದರೆ ಅಲ್ಲಿಯೂ ಚಿಕಿತ್ಸಾಲಯ ಇಲ್ಲವೆಂದು. ಉಳಿದಂತೆ ನಾವು ವರ್ಷ ವರ್ಷ ಅಪ್‌ಗ್ರೇಡೇಷನ್ ಮಾಡುತ್ತಿದ್ದೇವೆ. ಕೇಂದ್ರಗಳನ್ನು ಚಿಕಿತ್ಸಾಲಯ ಎಂದು ಅಪ್‌ಗ್ರೇಡ್ ಮಾಡುತ್ತಿದ್ದೇವೆ. ಚಿಕಿತ್ಸಾಲಯವನ್ನು ಆಸ್ಪತ್ರೆ ಎಂದು ಅಪ್‌ಗ್ರೇಡ್ ಮಾಡುತ್ತಿದ್ದೇವೆ. ಈ ಬಾರಿ 69 ಕೇಂದ್ರಗಳ ಜೊತೆಗೆ ಇನ್ನೂ 141 ಚಿಕಿತ್ಸಾಲಯಗಳನ್ನು ಮಾಡಬೇಕೆಂದು nucleus activities ಪ್ರಾರಂಭವಾಗಲಿ ಎಂದು ಕೆಲವು ಆಯ್ದ ಕೇಂದ್ರಗಳಲ್ಲಿ, ಆಯ್ದ ಅಂದರೆ, ಅಗತ್ಯ ನೀಡ್ ಬೇಸ್ ಮಾಡಿ, 200 ಚಿಕಿತ್ಸಾಲಯಗಳಿಗೆ ಬೇಕಾದ ಪ್ರಸ್ತಾವನೆಯನ್ನು ಅರ್ಥ ಸಚಿವರಿಗೆ ಕಳುಹಿಸಿ ಆಗಸ್ಟ್ ಸೆಪ್ಟಂಬರ್‌ನ ನಂತರ ಅದನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ತಮ್ಮೆಲ್ಲರ ಸಹಕಾರ ಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಛೇರ್ಮನ್‌ರೇ, ಮಾನ್ಯ ಮಂತ್ರಿಗಳೇ, ಇದನ್ನು ನೀವು ಪ್ಯಾಕೇಜ್ ಡೀಲ್ ಎಂದು ಹ್ಯಾಂಡಲ್ ಮಾಡುತ್ತಿದ್ದೀರೋ, ಅಥವಾ ಬರೀ ಆಸ್ಪತ್ರೆಗಳನ್ನು ಸೃಷ್ಟಿ ಮಾಡುವುದು ಎಂದು ಮಾಡುತ್ತಿದ್ದೀರೋ? What is the policy decision? If it is a package deal, everything is provided. If it is only a declaration of hospital, it is only hospital. NO service. ಅದು ಪ್ಯಾಕೇಜ್ ಡೀಲ್ ಆಗಬೇಕು.

ಡಾ॥ ವಿ.ಎಸ್. ಆಚಾರ್ಯ : ಮಾನ್ಯ ಛೇರ್ಮನ್‌ರವರೇ, ನಾನು ಪ್ರಾರಂಭದಲ್ಲಿಯೇ ಹೇಳಿದೆ. ಬರೀ ಬೋರ್ಡ್ ಬದಲಾವಣೆ ಮಾಡುವುದರಿಂದ ನಮ್ಮ ಪಶುಗಳಿಗಾಗಲಿ, ಪಶುಗಳ ಮಾಲೀಕರಿಗಾಗಲಿ ರೈತರಿಗಾಗಲಿ ಏನೂ ಪ್ರಯೋಜನವಾಗುವುದಿಲ್ಲ. ನಾವು ಅಲ್ಲಿ ಮಾಡುವುದಿದ್ದರೆ ತರಬೇಕಾದಂತಹ ವೈದ್ಯರನ್ನು ಹಾಕಿ ಚಿಕಿತ್ಸಾಲಯದ ಮಟ್ಟಿಗೆ, ನಂಜುಂಡಪ್ಪನವರ ಎಕ್ಸಪ್‌ಷನ್ ತೆಗೆದುಕೊಂಡು 69 ಕಡೆಗಳಲ್ಲಿ ನಾವು ಮಾಡಿಯೇ ಮಾಡುತ್ತೇವೆ. ಈ ವರ್ಷದಿಂದಲೇ ಪ್ರಾರಂಭ ಮಾಡಬೇಕೆಂದು ಎಲ್ಲಾ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಪೂರಕವಾಗಿ 141 ಕಡೆಗಳಲ್ಲಿ ಎಲ್ಲಿ ನೀಡ್ ಬೇಸ್ಡ್ ಇದೆ, ಅದನ್ನೂ ನೋಡುತ್ತೇವೆ. ಉಳಿದಂತ ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ನೇಮಕಾತಿ 936ರ ಪೈಕಿ 327 ಡಾಕ್ಟರ್‌ಗಳಿಗೆ ಈಗ ಏನು ನೋಟಿಫಿಕೇಷನ್ ಇದೆ, ಅವರು ಬಂದರೆ ನಮಗೆ ಅನುಕೂಲವಾಗುತ್ತದೆ. ಅಟ್‌ಲೀಸ್ಟ್ ಮೂರು–ನಾಲ್ಕು ಕಡೆ ಓಡಾಡುವುದರ ಬದಲಿಗೆ ಆ ವೈದ್ಯರು ಎರಡು ಕಡೆಗೋ ಅಥವಾ ಹತ್ತಿರದ ಒಂದು ಕಡೆಗೋ ಹೋಗಿ ಸೇವೆ ಸಲ್ಲಿಸಬಹುದು. ಆದರೆ ಮಾನ್ಯ ಹಿರಿಯ ಸದಸ್ಯರಾದ ಕೃಷ್ಣಪ್ಪನವರು ಹೇಳಿದ ಹಾಗೆ ಡಾಕ್ಟರ್ ಮತ್ತು ಡೌನ್‌ಸ್ಟೀಮ್‌ನವರಿಗೆ ಏನೇನು ಸಹಾಯಕರು ಬೇಕು ಅದನ್ನೆಲ್ಲಾ ಕೂಡಿಸಿದೆಯೇ ಮಾಡುವಂಥದ್ದು. ಒಂದು ಬ್ಲೂ ಪ್ರಿಂಟ್ ಬಗ್ಗೆ ನಾವು ಯೋಚನೆ ಮಾಡಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಛೇರ್ಮನ್‌ರೇ, ಡಾಕ್ಟರೇ, ನಿಮಗೂ ಗೊತ್ತಿದೆ. ನಾನೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. See the depletion in the cattle population also. ನಿಮ್ಮ ಆನ್ಯುಯಲ್ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಅದನ್ನು ನಾನು ಡಿಬೇಟಿಗೆ ಹೋಗುವುದಿಲ್ಲ.

ನಾಗೇಗೌಡರು ಇದ್ದಾಗ, even he thought of opening a poly clinic also. See, how much thinking in the year 1994–95ರಲ್ಲಿ, ಆದರೆ ಅನ್‌ಫಾಚ್ಯುನೇಟ್‌ಲಿ ನೀವು ಈಗ ಹೇಳುತ್ತೀರಿ, ಪಶು ಚಿಕಿತ್ಸಾ ಕೇಂದ್ರಗಳನ್ನು ನಂಜುಂಡಪ್ಪ ವರದಿ ಆಧಾರದ ಮೇಲೆ ತೆಗೆಯಬೇಕೆಂದು ಹೇಳುತ್ತೀರಿ, ನಮ್ಮ ಕಡೆ ಏನಾಗಿದೆ ಎಂದರೆ, ಜಿಯಾಗ್ರಫಿಕಲಿ ಅದು ಸರಿ ಇಲ್ಲ. We are in dearth. ನಮಗೂ ಬಹಳಷ್ಟು ಕಡಿಮೆ ಇವೆ. ಬರೀ ನಂಜುಂಡಪ್ಪ ವರದಿಯಲ್ಲಿ ನೀವು ಅದನ್ನು ಎನ್‌ಕ್ಲೋಸ್ ಮಾಡಿದ್ದೀರಿ, ಅದು ಏಳು ಜಿಲ್ಲೆಗಳಲ್ಲಿ ಮಾತ್ರ ಇದೆ. ಉಳಿದ ಕಡೆಗಳಲ್ಲಿ ಇಲ್ಲ. ನಾವೇನು ಮಾಡಬೇಕು ಹೇಳಿ? ಏಳು ಜಿಲ್ಲೆಗಳಲ್ಲಿ ಕೂಡ ಉತ್ತರ ಕರ್ನಾಟಕದ ಜಿಲ್ಲೆಗಳು ಬಹಳ ಕಡಿಮೆ ಇವೆ. ಮೇಜರ್ ಕ್ಯಾಟಲ್ ಪಾಪ್ಯುಲೇಷನ್ ಇರುವುದೇ ಉತ್ತರ ಕರ್ನಾಟಕದಲ್ಲಿ. ನನ್ನ ಮೈನ್ ಪ್ರಶ್ನೆ ಇರುವುದೇ ಅದು, ಪಶುಚಿಕಿತ್ಸಾ ಕೇಂದ್ರಗಳನ್ನಾದರೂ ತೆಗೆಯಿರಿ, ಅಥವಾ ಅಪ್‌ಗ್ರೇಡೆಡ್ ಆಸ್ಪತ್ರೆ ಆದರೂ ತೆಗೆಯಿರಿ. Don't take Nanjundappa report as parameter itself. ಇದು ದನದ ಡಾಕ್ಟರ್.

ಡಾ. ವಿ.ಎಸ್. ಆಚಾರ್ಯ : ಮಾನ್ಯ ಛೇರ್ಮನ್‌ರೇ, ನಾನು ಅದಕ್ಕೆ ಪೂರಕವಾಗಿ ಇನ್ನೂ 141 totalling 200 ಮಾಡುವಂತಹ ಯೋಚನೆ ಮಾಡಿದ್ದೇವೆ. ಇನ್ನೊಂದು ವಿಷಯ ಹೇಳಬೇಕೆಂದರೆ, ನಮ್ಮ ಕ್ಯಾಟಲ್ ಪಾಪ್ಯುಲೇಷನ್ ಮೇಲೆ 3069 ಪಶು ಚಿಕಿತ್ಸಾಲಯಗಳು ಸಾಕು ಎಂದು ಇದೆ. ಆದರೆ ನಮ್ಮ ಹತ್ತಿರ ಈಗಾಗಲೇ 3,744 ಪಶು ಚಿಕಿತ್ಸಾ ಕೇಂದ್ರಗಳು ಇವೆ ಎಂದಾದರೆ, ಅದರ ಅರ್ಥವೇ ಮಾನ್ಯ ಸದಸ್ಯರು ಹೇಳಿದ ಹಾಗೆ ಅದು ಜಿಯಾಗ್ರಫಿಕಲಿ ಸರಿಯಾಗಿ ಸ್ಪೆಡ್ ಆಗಿಲ್ಲ. ಹಿಂದಿನ ಯಾವುದೋ ಅವ್ಯವಸ್ಥೆಗಳ ಕಾರಣದಿಂದ ಒತ್ತಡದಿಂದ ಕೆಲವು ಕಡೆ ಹೆಚ್ಚಿಗೆ ಆಗಿವೆ. ಕೆಲವು ಕಡೆ ಕಡಿಮೆ ಆಗಿವೆ, ನಾನು ಅದನ್ನು ಒಪ್ಪುತ್ತೇನೆ. ಅದಕ್ಕೋಸ್ಕರ ಈ ಬಾರಿ ಸುಮಾರು 200 ಪಶು ಚಿಕಿತ್ಸಾಲಯಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಆರ್ಥಿಕ ಇಲಾಖೆಯ ಅನುಮತಿ ಬಂದ ಕೂಡಲೇ ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ರೀಜನಲ್ ಇಂಬ್ಯಾಲೆನ್ಸ್ ಆಗಬಾರದು ಎಂದು ನಾನು ಹೇಳುವುದು. See, might is right ಅಂದ ಹಾಗೆ ಯಾರ ಕೈಯಲ್ಲಿ ಅಧಿಕಾರ ಇರುತ್ತದೆ ಅವರು. ನಾಳೆ ನೀವು ಇರುವುದಿಲ್ಲ. ನಾವು ಒಂದು ಪಿಟಿಷನ್ ಕೊಟ್ಟರೆ ಅವರು ತಿಳಿದುಕೊಳ್ಳುವವರು ಇದ್ದರೆ ಚೆನ್ನಾಗಿ ಇರುತ್ತದೆ. Otherwise, it goes on party line distribution.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಛೇರ್ಮನ್‌ರೇ, ಈ ಬಾರಿ ಎಲ್ಲೆಲ್ಲಿ ಪಶುಗಳ ಸಂಖ್ಯೆ ಹೆಚ್ಚಿಗೆ ಇದೆ, ಯಾವ್ಯಾವ ಭಾಗಗಳಲ್ಲಿ ನಮ್ಮ ಸರ್ವೀಸಸ್ ಕಡಿಮೆ ಇದೆ, ಅದನ್ನೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ನಾನು ಈಗಾಗಲೇ ಹೇಳಿದ ಹಾಗೆ 69 + 141 ಅಷ್ಟು ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಛೇರ್ಮನ್‌ರೇ, you must take it on account ಸ್ಪೆಸಿಫಿಕಲಿ ಬಾಗೇವಾಡಿ, ನಾಲ್ಕಾರು ಕಡೆ ನಾನು ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಅಲ್ಲಿ ಮಾಡಬೇಕು.

ಶ್ರೀ ರಾಜಶೇಖರ ಸಿಂಧನೂರು : ಮಾನ್ಯ ಛೇರ್ಮನ್‌ರೇ, ಸವಣೂರು ಶಿಗ್ಗಾವ್ ಎರಡೂ ತಾಲ್ಲೂಕುಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದೆ 3–4 ತಿಂಗಳುಗಳಾದವು. ಅಲ್ಲಿ ಉಪಕರಣಗಳೂ ಇಲ್ಲ, ಔಷಧಿಗಳು ಇಲ್ಲ, ಡಾಕ್ಟರ್‌ಗಳ ಕೊರತೆ ಇದೆ, ನಮ್ಮ ಸವಣೂರು ದೊಡ್ಡ ತಾಲ್ಲೂಕು ಇದೆ. ಅದರ ಜೊತೆಗೆ ಕಟ್ಟಡ ಕೂಡ ಬಹಳ ಶಿಥಿಲಗೊಂಡಿದೆ. ಅದರ ಬಗ್ಗೆ ತಾವು ಗಮನಹರಿಸಬೇಕೆಂದು ತಮ್ಮ ಮುಖಾಂತರ ಅವರಿಗೆ ಒತ್ತಾಯ ಮಾಡುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ನೀವು ಇನ್ನೂ 200 ಜನರಿಗೆ ನೇಮಕಾತಿ ಮಾಡಿದ್ದೀರಿ. ಆದರೆ ನಮ್ಮ ಗುಲ್ಬರ್ಗ ಜಿಲ್ಲೆಗೆ ಮಾತ್ರ ಕೇವಲ 8 ಜನ ವೈದ್ಯರನ್ನು ನೀವು ಕೊಟ್ಟಿದ್ದೀರಿ. ಗುಲ್ಬರ್ಗದ 10 ತಾಲ್ಲೂಕುಗಳಲ್ಲಿ 9 ತಾಲ್ಲೂಕುಗಳು ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳು ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದು. ಆದರೆ ನೀವು ಅಲ್ಲಿಗೆ 200 ಜನರಲ್ಲಿ ಕೇವಲ 8 ಜನ ವೈದ್ಯರಿಗೆ ಕಳುಹಿಸುತ್ತೀರಿ ಎಂದರೆ, ನಾವು ಸರ್ಕಾರದ ಧೋರಣೆಯನ್ನು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕು? ನಮ್ಮ ತಾಲ್ಲೂಕಿನಲ್ಲಿ 10 ಡಾಕ್ಟರ್‌ಗಳ ಕೊರತೆ ಇದ್ದರೆ ಕೇವಲ ಇಬ್ಬರಿಗೆ ಕಳುಹಿಸುತ್ತೀರಿ. ಅವರೂ ಇನ್ನೂ ಬಂದು ಜಾಯಿನ್ ಆಗಿಲ್ಲ. 200 ಜನರಲ್ಲಿ ಕನಿಷ್ಟ 25 ಜನಗಳಿಗಾದರೂ ಕಳುಹಿಸಬೇಕು.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಛೇರ್ಮನ್‌ರೇ, ನಮ್ಮ ರಿಕ್ವೈರ್‌ಮೆಂಟ್ as on May 1st 1022 ವೈದ್ಯರು. ನಮಗೆ ನೇಮಕ ಮಾಡಿಕೊಳ್ಳುವುದಕ್ಕೆ ದೊರಕಿದ್ದು ಒಟ್ಟು 236 ಜನ. ಅಂದರೆ ನಾವು ಎಲ್ಲಾ ಕಡೆಗೆ ಶೇಕಡ 20ಕ್ಕಿಂತ ಕಡಿಮೆ ಇಲ್ಲದ ಹಾಗೆ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೆ ಹಂಚಿ ಬಹಳ ವ್ಯವಸ್ಥಿತವಾಗಿ ಕೊಟ್ಟಿದ್ದೇವೆ. ಆ ಪ್ರಕಾರ ನಿಮ್ಮಲ್ಲಿ ಹತ್ತರಲ್ಲಿ ಇಬ್ಬರು ವೈದ್ಯರು ಬಂದಿದ್ದಾರೆಂದರೆ ನನಗೆ ಸಮಾಧಾನವಾಯಿತು. ನಮ್ಮ ರೇಷಿಯೋ ನಿಮ್ಮವರೆಗೂ ಮುಟ್ಟಿದೆ.

ಡಾ: ಎಂ.ಸಿ. ಸುಧಾಕರ ರೆಡ್ಡಿ : ಮಾನ್ಯ ಛೇರ್ಮನ್‌ರೇ, ಸನ್ಮಾನ್ಯ ಪಶು ವೈದ್ಯಕೀಯ ಸಚಿವರಲ್ಲಿ ಕೇಳುವುದು ಇಷ್ಟೆ. ನಂಜುಂಡಪ್ಪ ವರದಿ ಪ್ರಕಾರ ಪ್ರತಿಯೊಂದು ನಾವು ಮಾಡಬೇಕೆಂದರೆ, ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಪ್ರತಿ ದಿವಸ ಸುಮಾರು 6.50 ಲಕ್ಷ ಲೀಟರ್‌ಗಿಂತ ಹೆಚ್ಚು ಹಾಲು ಉತ್ಪಾದನೆ ಆಗುತ್ತಿದೆ. ತಾವು ಪ್ರತಿಯೊಂದಕ್ಕೂ ನಂಜುಂಡಪ್ಪ ವರದಿ ಅತೀ ಹಿಂದುಳಿದ ಭಾಗವೆಂದು ಹೇಳಿ ಅಲ್ಲಿ ನಾವು ಪಶುವೈದ್ಯಕೀಯ ಕೇಂದ್ರಗಳನ್ನು ನಾವು ಸ್ಥಾಪನೆ ಮಾಡದೇ ಇದ್ದರೆ ಯಾವ ರೀತಿಯಾಗಿ ಅವರು ಪಶುಗಳ ಆರೋಗ್ಯವನ್ನು ಕಾಪಾಡುವುದಕ್ಕಾಗುತ್ತದೆ? ವೇಕೆನ್ಸಿಗಳ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಸುಮಾರು ಐದಾರು ವರ್ಷಗಳಿಂದ ಈ ಪರಿಸ್ಥಿತಿ ಇದೆ. ಪ್ರತಿಯೊಂದಕ್ಕೂ ನಂಜುಂಡಪ್ಪ ವರದಿ ಎಂದರೆ, ಅಲ್ಲಿ ನಮ್ಮ ಕೋಲಾರ ಜಿಲ್ಲೆಗೆ ಮುಖ್ಯವಾದ ಜೀವನಾಡಿ ಹೈನುಗಾರಿಕೆ. ಅಂಥದ್ದಕ್ಕೆ ನೀವು ಆದ್ಯತೆ ಕೊಡಬೇಕು. ನಮ್ಮಲ್ಲಿ ಯಾವುದೇ ರೀತಿಯ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಇಲ್ಲ. ನಮ್ಮ ರೈತರಿಗೋಸ್ಕರ ತಾವು ಈ ನಂಜುಂಡಪ್ಪನವರ ವರದಿಯಿಂದ ಹೊರ ಬಂದು ಸ್ವಲ್ಪ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಛೇರ್ಮನ್‌ರೇ, ನಮ್ಮ ರಾಜ್ಯದಲ್ಲಿ ಶ್ವೇತ ಕ್ರಾಂತಿ ಬಹಳ ಉತ್ತಮ ರೀತಿಯಲ್ಲಿ ನಡೆದಿದೆ. ದೇಶದಲ್ಲಿಯೇ ಗುಜರಾತ್ ನಂತರ ಎರಡನೇ ಸ್ಥಾನದಲ್ಲಿ ಕರ್ನಾಟಕ ಹಾಲು ಉತ್ಪಾದನೆಯಲ್ಲಿ ಇದೆ. ಆದರೆ ಹಾಲು ಉತ್ಪಾದನೆ ಯಾವ ವೇಗದಲ್ಲಿ ಆಯಿತು, ಅಷ್ಟೇ ವೇಗದಲ್ಲಿ ಸರಿಗಟ್ಟುವಂತಹ ರೀತಿಯಲ್ಲಿ ನಮ್ಮ ಪಶುಸಂಗೋಪನಾ ವ್ಯವಸ್ಥೆ ಮಾಡಲಿಕ್ಕೆ ನಮಗೆ ಆಗಲಿಲ್ಲ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಕೆಎಮ್‌ಎಫ್ ನವರ ಚಟುವಟಿಕೆ ಎಲ್ಲಿ ಇದೆ, ಅಲ್ಲಿ ಕೆಎಮ್‌ಎಫ್‌ನ ವೈದ್ಯಕೀಯ ವ್ಯವಸ್ಥೆಗೆ ಸಪೋರ್ಟ್ artificial insemination ಇತ್ಯಾದಿಗಳು ಎಲ್ಲೆ ಇರುವುದರಿಂದ ಸ್ವಲ್ಪ ಮಟ್ಟಿಗೆ, they are taken care of. ತಾವು ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಇನ್ನು ಏನು ಮಾಡಬಹುದೋ ಅದನ್ನು ಮಾಡುತ್ತೇವೆ. ನಂಜುಂಡಪ್ಪನವರ ವರದಿಯಲ್ಲಿ ತಿಳಿಸಿರುವಂಥದ್ದು ತೀರಾ ಬಹಳ ಹಿಂದುಳಿದಂತಹ desperate cases ಅದನ್ನು ನಾವು ಅಟೆಂಡ್ ಮಾಡಲೇಬೇಕಾಗಿದೆ. ಈ ವರ್ಷ ಅದನ್ನು ಮಾಡುತ್ತೇವೆ. ತಾವು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಪರಿಶಿಷ್ಟ ಜಾತಿ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ತಡೆಹಿಡಿದಿರುವುದು.

173 (888) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು;

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಸಮಾಜ ಕಲ್ಯಾಣ ಇಲಾಖೆಯು ಕಾಲೇಜು ವಿದ್ಯಾರ್ಥಿಗಳಿಗಾಗಿ ಮಂಜೂರು ಮಾಡಲಾಗುತ್ತಿರುವ ವಿದ್ಯಾರ್ಥಿ ವೇತನವನ್ನು ತಡೆಹಿಡಿದಿರುವುದಿಲ್ಲ.

ಶಾಲಾ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಯೋಜನೆಗಾಗಿ ಮಾತ್ರ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿರುವುದಿಲ್ಲ. ಆದಕಾರಣ, ಪ್ರಸಕ್ತ ಶೈಕ್ಷಣಿಕ ಸಾಲಿಗಾಗಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿಕೊಂಡು ಮಂಜೂರಾತಿಯನ್ನು 2006–07ನೇ ಸಾಲಿನಲ್ಲಿ ಮುಂದುವರೆಸಲಾಗುವುದು.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ನಾನು ಪ್ರಶ್ನೆ ಕೇಳತಕ್ಕಂತಹ ಸಂದರ್ಭದಲ್ಲಿ, ಅಂದರೆ 10 ದಿವಸಗಳ ಹಿಂದೆ ಪ್ರಶ್ನೆಯನ್ನು ಕೇಳತಕ್ಕಂತಹ ಸಂದರ್ಭದಲ್ಲಿ ಒಂದರಿಂದ ಏಳನೇ ತರಗತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ವರ್ಷಕ್ಕೆ 75 ರೂಪಾಯಿ ಕೊಡುವುದು, 8 ರಿಂದ 10ನೇ ತರಗತಿ ಓದತಕ್ಕಂತಹ ಮಕ್ಕಳಿಗೆ 100